SRI JEEVARAJ ALVA (Jayamahal).— Since the water scarcity is acute as Sri Laksmisagar has put it clearly, I want to make a suggestion to the Government. The Corporation has hardly 10 Lorries and they have proposed to take 10 more. Since the scarcity is acute, they can utilise the services of the M.E.G. or the local army units to get over the problem. The M.E.G. and the Army units have got several water tankers. So, I request the Government to see that water supply is good.

ಶ್ರೀ ಧರ್ಮಸಿಂಗ್.— ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನಾವು ತೀವ್ರವಾದ ಗಮನ ಕೊಡುತ್ತಿದ್ದೇವೆ. ಮತ್ತು ನಾಳೆ ಒಂದು ವೇಳೆ ಅದು ರಿಪೇರಿ ಆಗದಿದ್ದರೆ ಲಾರಿಗಳ ಮುಖಾಂತರ ಮತ್ತು ಮಿಲಿಟರಿ ಲಾರಿಗಳ ಮುಖಾಂತರ ಎಲ್ಲೆಲ್ಲಿ ನೀರಿನ ಸರಬರಾಯಿ ತೊಂದರೆಯಾಗಿದೆ ಆ ಪ್ರದೇಶಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಇಂಥಾ ದಿವಸ ನೀರು ಬರುವುದಿಲ್ಲ ಎನ್ನುವುದನ್ನು ಪತ್ರಿಕೆಗಳಲ್ಲಿ ಹಾಕಿದರೆ ಸಾಲದು ಲೌಡ್ ಸ್ಪೀಕರ್ ಮುಖಾಂತರ ಪ್ರಚಾರ ಮಾಡಬೇಕಾಗಿತ್ತು ಎಂದು ಹೇಳಿದರು. ಇದರಲ್ಲಿ ಸರ್ಕಾರದ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹೊಣೆಗಾರಿಕೆ ಇದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ನಾಳೆ ಲಾರಿಗಳು ಮತ್ತು ಮಿಲಿಟರಿ ಲಾರಿಗಳನ್ನು ಉಪಯೋಗಿಸಿಕೊಂಡು ಜನಗಳಿಗೆ ನೀರಿನ ತೊಂದರೆಯಾಗದಂತೆ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆ. ಅನಾನುಕೂಲವಾಗದ ಹಾಗೆ ನೋಡಿಕೊಳ್ಳುತ್ತೇವೆ.

SRI B. B. SAYANAK.— Sir, the Minister has promised to make a statement in respect of the election to the Corporation. Let him make the statement now.

SRI DHARAM SINGH. — The statement is here and if the Chair permits, I am ready to make the statement.

MR. SPEAKER.— Other business is there. We have to take up the regular business also. Any how, I will look into the matter.

STATEMENT BY THE MINISTER

re : Illegal Collection of fee from S C. and S T. in Bhandharkar College, Manglore.

† ಶ್ರೀಮತಿ ಮನೋರಮಾ ಮಧ್ವರಾಜ್ (ಸಮಾಜ ಕಲ್ಯಾಣ. ಹಿಂದುಳಿದ ವರ್ಗ ಹಾಗೂ ಮಕ್ಕಳ ಕಲ್ಯಾಣ ಶಾಖೆಯ ರಾಜ್ಯ ಮಂತ್ರಿಗಳು).—

ಸರ್ಕಾರಿ ಆಜ್ಞೆ ಸಂಖ್ಯೆ ಎಸ್‌ಡಬ್ಲ್ಯೂಕೆಎಲ್ ೨೭೩ ಬಿಸಿಎ ೭೮ ದಿನಾಂಕ ೨೭-೩-೧೯೭೯ರನ್ವಯ ಕುಟುಂಬದ ವಾರ್ಷಿಕ ವರಮಾನವು ೩,೬೦೦ ರೂಪಾಯಿಗಳಿಗಿಂತ ಕಡಿಮೆ ಇರುವ ವಿದ್ಯಾರ್ಥಿಗಳು ಯಾವ ಕೋಮು ಭೇದವೂ ಇಲ್ಲದೆ ಭೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕ ಇವುಗಳಿಂದ ವಿನಾಯಿತಿ ಪಡೆಯುತ್ತಾರೆ. ಅದೇ ಮೇರೆಗೆ ಸರ್ಕಾರಿ ಆಜ್ಞೆ ಎಸ್‌ಡಬ್ಲ್ಯೂಎಲ್ ೯ — ಬಿಸಿಎಸ್ ೮೦ ದಿನಾಂಕ ೭-೨-೧೯೮೦ ರನ್ವಯ ಈ ವಿದ್ಯಾರ್ಥಿಗಳು ಪರಿಕ್ಷಾ ಶುಲ್ಕದಿಂದಲೂ ವಿನಾಯಿತಿ ಪಡೆಯುತ್ತಾರೆ.

ಸರ್ಕಾರಿ ಆಜ್ಞೆ ಕ್ರಮ ಸಂಖ್ಯೆ ಎಸ್‌ಡಬ್ಲ್ಯೂಕೆಎಲ್ ೩೧ ಬಿಸಿಎಸ್ ೭೯ ದಿನಾಂಕ ೧೯ನೇ ಜೂನ್ ೧೯೭೯ ರಲ್ಲಿ ರೂಪಿತವಾದ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ನಿಯಮಗಳನ್ವಯ ಸರ್ಕಾರದಿಂದ ಸಹಾಯ ಧನ ಪಡೆಯುವ ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ವಿನಾಯತಿಯ ನಷ್ಟವನ್ನು ಸರ್ಕಾರ ನಿಗದಿಪಡಿಸಿದ ದರಗಳಂತೆ (Standard Rates) ಪಾಡಬೇಕೆಂದು ಗೊತ್ತುಪಡಿಸಲಾಗಿದೆ. ಸಹಾಯ ಧನ ಪಡೆಯದೆ ಇರುವ ಖಾಸಗಿ ವಿದ್ಯಾರ್ಥಿ ಸಂಸ್ಥೆಗಳಿಗೆ (ಸರ್ಕಾರದಿಂದ ಮಾನ್ಯತೆ ಪಡೆದ ಅಥವಾ ವಿಶ್ವವಿದ್ಯಾನಿಲಯಗಳಿಗೆ

ಜೋಡಿಸಲ್ಪಟ್ಟ) ಶುಲ್ಕ ವಿನಾಯತಿ ನಷ್ಟವನ್ನು ಆಯಾ ಪ್ರಕಾರದ (ಮಾದರಿ) ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಯಲ್ಲಿದ್ದ ದರಗಳಲ್ಲಿ ತುಂಬಿಕೊಡಬೇಕೆಂದು ನಿಗದಿಪಡಿಸಲಾಗಿದೆ.

ಈ ಮೇಲೆ ಹೇಳಲಾದ ಸರ್ಕಾರಿ ಆಜ್ಞೆಗಳನ್ವಯ ಕಾಲೇಜು ಶಿಕ್ಷಣ ಇಲಾಖೆಯು ನಿರ್ದೇಶಕರು ಮಂಜೂರಾತಿ ನೀಡಿದ ಮೇರೆಗೆ, ೧೯೭೯-೮೦ನೇ ವರ್ಷಕ್ಕೆ ಸಂಬಂಧಿಸಿದಂತೆ ಕುಂದಾಪುರ ಭಂಡಾರ್‌ಕರ್ ಕಲಾ ಮತ್ತು ವಿಜ್ಞಾನ ವಿದ್ಯಾಲಯಕ್ಕೆ ಶುಲ್ಕ ನಷ್ಟವನ್ನು ಮಂಗಳೂರಿನ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು ಈಗಾಗಲೇ ತುಂಬಿಕೊಟ್ಟಿದ್ದಾರೆ. ಈ ಶಿಕ್ಷಣ ಸಂಸ್ಥೆಗೆ ಮರುಪಾವತಿ ಮಾಡಿದ ಒಟ್ಟು ಹಣವು ಸುಮಾರು ೫೪,೧೮೦ ರೂಪಾಯಿಗಳಷ್ಟಿದ್ದು ಇದರಿಂದ ವಿದ್ಯಾರ್ಥಿಗಳು ಈ ಸೌಲಭ್ಯದ ಪ್ರಯೋಜನ ಪಡೆದಿದ್ದಾರೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರವು ನಿಗದಿಪಡಿಸಿದ ಶುಲ್ಕ ದರಗಳ ಎರಡರಷ್ಟನ್ನೂ ವಿದ್ಯಾರ್ಥಿಗಳಿಂದ ಪಡೆಯಲು ಪರವಾನಿಗೆ ಹೊಂದಿದೆ. ಇಂತಹ ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ನಷ್ಟವು ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ ಮಾತ್ರ ಸದ್ಯಕ್ಕೆ ಹಿಂತಿರುಗಿಸಲ್ಪಡುವುದರಿಂದ ಭಂಡಾರ್‌ಕರ್ ಕಾಲೇಜಿನಂತಹ ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿದ ದರಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಉಳಿಯುವ ಹಣವನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳಲು ಪ್ರಯತ್ನ ಮಾಡುತ್ತಲಿದೆ.

ಮೇಲಿನ ಆಜ್ಞೆಗಳನ್ನು ಗಮನದಲ್ಲಿಟ್ಟುಕೊಂಡು ಮಂಗಳೂರಿನ ಜಿಲ್ಲಾ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗಗಳ ಅಧಿಕಾರಿಗಳು ಜಿಲ್ಲೆಯಲ್ಲಿನ ಎಲ್ಲಾ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರಿಗೆ ಆದಾಯದ ಪ್ರಮಾಣ ಪತ್ರವನ್ನು ಕೊಟ್ಟು ವಿದ್ಯಾರ್ಥಿಗಳಿಂದ ಬೋಧನ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಇವುಗಳನ್ನು ಪ್ರಸಕ್ತ ವರ್ಷದಲ್ಲಿ ವಸೂಲು ಮಾಡುವಂತೆ ಮನವಿ ಮಾಡಿಕೊಂಡಿದ್ದಾರೆ. ಅವರು ಅದೇ ಮನವಿಯಲ್ಲಿ ಕಳೆದ ವರ್ಷ ಅಂದರೆ ೧೯೭೯-೮೦ ರಲ್ಲಿ ವಿದ್ಯಾರ್ಥಿಗಳು ಆದಾಯ ಪ್ರಮಾಣ ಪತ್ರ ಕೊಟ್ಟರೂ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಕೆಲವು ವಿದ್ಯಾ ಸಂಸ್ಥೆಗಳು ವಸೂಲು ಮಾಡಿದ್ದರಿಂದ ವಿದ್ಯಾರ್ಥಿಗಳು ಮತ್ತು ಪಾಲಕರು ತೊಂದರೆಗೊಳಗಾದರೆಂಬುದನ್ನು ತಿಳಿಸಿದ್ದಾರೆ.

ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಅಧಿಕಾರಿಗಳ ಈ ಮನವಿಗೆ ಉತ್ತರ ರೂಪವಾಗಿ ಭಂಡಾರ್‌ಕರ್ ಮತ್ತು ಕಲಾ ಮತ್ತು ವಿಜ್ಞಾನ ಮಹಾ ವಿದ್ಯಾಲಯದ ಪ್ರಾಂಶುಪಾಲರು ಸರ್ಕಾರದಿಂದ ಕಾಲೇಜಿಗೆ ಬರಬೇಕಾದ ಪೂರ್ತಿ ಶುಲ್ಕವನ್ನು (ಆಡಳಿತ ವರ್ಗದವರು ನಿಗದಿ ಪಡಿಸಿದ ದರಗಳಲ್ಲಿ) ಮರು ಪಾವತಿ ಮಾಡುವ ಆಶ್ವಾಸನೆಯನ್ನು ನೀಡಿದಲ್ಲಿ ಮಾತ್ರ ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡುವುದನ್ನು ನಿಲ್ಲಿಸಬಹುದೆಂದು ತಿಳಿಸಿದ್ದಾರೆ. ಸರ್ಕಾರವು ಕಾಲೇಜು ಆಡಳಿತ ವರ್ಗದವರೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ವಿದ್ಯಾರ್ಥಿಗಳಿಂದ ಸರ್ಕಾರವು ನಿಗದಿ ಪಡಿಸಿದ ಶುಲ್ಕಗಳ ಎರಡರಷ್ಟನ್ನೂ ಶಿಕ್ಷಣ ಸಂಸ್ಥೆಯು ವಸೂಲು ಮಾಡಿಕೊಳ್ಳಬಹುದು, ಆದರೆ, ೧೯೭೯-೮೦ನೇ ವರ್ಷ ಶಿಕ್ಷಣ ಸಂಸ್ಥೆಗೆ ಶುಲ್ಕ ವಿನಾಯತಿಯ ನಷ್ಟವು ಸರ್ಕಾರ ನಿಗದಿ ಪಡಿಸಿದ ದರಗಳಲ್ಲಿ ಮಾತ್ರ ಹಿಂದಿರುಗಿಸಲ್ಪಟ್ಟಿದೆ. ಆದುದರಿಂದ ಉಳಿದ ಶೇಕಡ ೫೦ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲೇ ಬೇಕಾಗುತ್ತದೆ ಎಂಬುದಾಗಿ ಸಂಸ್ಥೆಯ ತೊಂದರೆಗಳನ್ನು ವಿವರಿಸಿದ್ದಾರೆ.

ಮಾನ್ಯ ಸದಸ್ಯ ಶ್ರೀ ಎ ಜಿ ಕೊಡ್ಗಿಯವರ ಗಮನ ಸೆಳೆಯುವ ಸೂಚನೆ ಬಂದ ನಂತರ ಭಂಡಾರ್‌ಕರ್ ಕಾಲೇಜಿನ ಪ್ರಿನ್ಸಿಪಾಲರೊಡನೆ ದೂರವಾಣಿಯಿಂದ ಸಂಪರ್ಕಿಸಿ ಸಮಸ್ಯೆಯನ್ನು ಚರ್ಚಿಸಲಾಗಿದೆ. ಕಾಲೇಜು ಶಿಕ್ಷಣ ಇಲಾಖೆಯು ಪ್ರಸಕ್ತ ವರ್ಷ ವಿದ್ಯಾರ್ಥಿಗಳಿಂದ ಯಾವುದೇ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ವಸೂಲು ಮಾಡಕೂಡದೆಂದು ಮತ್ತು ಈಗಾಗಲೇ ವಸೂಲು ಮಾಡಲಾದ ಹೆಚ್ಚುವರಿ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕಗಳ ಹಣವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಹಿಂತಿರುಗಿಸಬೇಕೆಂದು ಪ್ರಾಂಶುಪಾಲರಿಗೆ ಸೂಚನೆಗಳನ್ನು ಕೊಟ್ಟಿದೆ.

ಶ್ರೀ ಎ. ಜಿ. ಕೊಡ್ಗಿ.— ಅಧ್ಯಕ್ಷರೇ ಈ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಸರ್ಕಾರಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ೧೯೭೯-೮೦ ಮತ್ತು ೧೯೮೦-೮೧ನೇ ಸಾಲಿನ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕವನ್ನು ವಸೂಲು ಮಾಡಕೂಡದು ಎಂದು ಸರ್ಕಾರದವರು ಆಜ್ಞೆ

ಯನ್ನು ಕೊಟ್ಟಿದ್ದಾರೆ. ಆದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈಗ ಭಂಡಾರ್‌ಕರ್ ಕಾಲೇಜಿನಲ್ಲಿ ೧೯೭೯-೮೦ನೇ ಸಾಲಿನ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯದ ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿದ್ದಾರೆ. ಮಾರ್ಕ್ಸ್ ಕಾರ್ಡ್ ಕೊಡಬೇಕಾದರೆ ಶುಲ್ಕವನ್ನು ಕೊಡಬೇಕು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಆ ರೀತಿ ಅವರು ಶುಲ್ಕವನ್ನು ವಸೂಲು ಮಾಡುವುದನ್ನು ಸರ್ಕಾರದವರು ತಡೆಹಿಡಿಯಬೇಕು. ಈ ವಿಚಾರವನ್ನು ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಅದನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು. ಸರ್ಕಾರಿ ಆಜ್ಞೆಯ ಪ್ರಕಾರ ಸರ್ಕಾರಿ ಕಾಲೇಜಾಗಲೀ, ಖಾಸಗೀ ಕಾಲೇಜಾಗಲೀ ಈ ಶುಲ್ಕ ಸಂಪೂರ್ಣವಾಗಿ ವಿನಾಯಿತಿ ಆಗಬೇಕು. ಆದ್ದರಿಂದ ಈಗ ವಸೂಲು ಮಾಡುತ್ತಿರುವ ಶುಲ್ಕವನ್ನು ತಡೆ ಹಿಡಿಯಬೇಕಾಗುತ್ತದೆ. ಭಂಡಾರ್‌ಕರ್ ಕಾಲೇಜಿನಲ್ಲಿ ೧೯೭೯-೮೦ನೇ ಸಾಲಿನ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಇದು ಸರ್ಕಾರಿ ಆಜ್ಞೆಗೆ ವಿರೋಧ ವಾಗುತ್ತದೆ. ಆದ್ದರಿಂದ ಈ ಶುಲ್ಕವನ್ನು ವಸೂಲು ಮಾಡದ ಹಾಗೆ ತಡೆಹಿಡಿಯಬೇಕು ಎಂದು ಅವರಿಗೆ ಸೂಚನೆಯನ್ನು ಕೊಟ್ಟರೆ ಸಾಕು.

ಶ್ರೀಮತಿ ಮನೋರಮ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ ಈಗಾಗಲೇ ವಿದ್ಯಾ ಇಲಾಖೆ ಈ ಬಗ್ಗೆ ಕೂಲಂಕುಶವಾಗಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ನಾನು ಈ ಸಭೆಯಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ,

re : Admission of Candidates to 8th Standard

†ಶ್ರೀ ಎಸ್.ಆರ್. ಬೊಮ್ಮಾಯಿ.— ಸ್ವಾಮಿ ಸರ್ಕಾರದವರು ೭ನೇ ತರಗತಿಯ ಪರೀಕ್ಷೆಯನ್ನು ತೆಗೆದು ಹಾಕಿದ ಮೇಲೆ ೮ನೇ ತರಗತಿಗೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಎರಡುಪಟ್ಟು ಆಗಿದೆ ಶಾಲಾ ಕಾಲೇಜುಗಳು ಪ್ರಾರಂಭವಾದ ಮೇಲೆ ನಾನು ಪ್ರವಾಸ ಮಾಡಿದಾಗ ಅನೇಕ ಶಾಲಾಕಾಲೇಜುಗಳಿಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿ ವಿದ್ಯಾರ್ಥಿಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಇದ್ದರು. ಪ್ರವೇಶಾವಕಾಶವನ್ನು ಪಡೆಯತಕ್ಕ ವಿದ್ಯಾರ್ಥಿಗಳ ಸಂಖ್ಯೆ ಎರಡುಪಟ್ಟು ಆಗುವುದನ್ನು ತಿಳಿಸಿ ಆ ಶಾಲೆಗಳಲ್ಲಿ ಅಲ್ಲಿಗೆ ಬರತಕ್ಕ ಎಲ್ಲಾ ವಿದ್ಯಾರ್ಥಿಗಳಿಗೂ ಸ್ಥಳಾವಕಾಶದ ವ್ಯವಸ್ಥೆಯನ್ನು ಮಾಡಿದ್ದೀರಾ ? ಸರ್ಕಾರಿ ಶಾಲೆಗಳಲ್ಲಾಗಲೀ, ಖಾಸಗೀ ಶಾಲೆಗಳಲ್ಲಾಗಲೀ, ಒಂದು ತರಗತಿಯಲ್ಲಿ ೪೦ ವಿದ್ಯಾರ್ಥಿಗಳ ಮೇಲೆ ಕುಳಿತುಕೊಳ್ಳಕೂಡದು ಎಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ಆದರೆ ನಾನು ಸರ್ಕಾರಿ ಶಾಲೆಯನ್ನು ನೋಡಿದ್ದೇನೆ. ಖಾಸಗೀ ಶಾಲೆಗಳನ್ನು ನೋಡಿದ್ದೇನೆ. ಒಂದು ಕೊಠಡಿಯಲ್ಲಿ ೪೦ ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೆ ಅವಕಾಶವಿರುವಂತಹ ಜಾಗದಲ್ಲಿ ೭೭ ವಿದ್ಯಾರ್ಥಿಗಳು ಕುಳಿತುಕೊಂಡಿದ್ದಾರೆ. ಇದಕ್ಕೆ ತಾವು ಪರವಾನಿಗೆ ಕೊಟ್ಟಿದ್ದೀರಾ? ಈ ಶಾಲಾ ಕೊಠಡಿಗಳು ದನದ ಕೊಟ್ಟಿಗೆ ಇದ್ದ ಹಾಗೆ ಇವೆ. ಕುರಿ ದೊಡ್ಡಿ ಇದ್ದ ಹಾಗೆ ಇವೆ. ಈ ಕೊಠಡಿಯಲ್ಲಿ ೭೭ ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಈಗ ಕೆಲವು ಶಾಲೆಗಳಲ್ಲಿ ಸುಮಾರು ೭೦ ಜನ ವಿದ್ಯಾರ್ಥಿಗಳನ್ನು ಕೂಡಿಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸರ್ಕಾರದವರು ಸರ್ಕಾರಿ ಶಾಲೆಗಳಲ್ಲಿ ಹೆಚ್ಚು ಕಟ್ಟಡಗಳನ್ನು ಕಟ್ಟಲಿಕ್ಕೆ ಮುಂದಾಲೋಚನೆ ಮಾಡಿದ್ದಾರೆಯೇ? ಅಥವಾ ಖಾಸಗೀ ಶಾಲೆಗಳವರು ಎರಡುಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕ ವ್ಯವಸ್ಥೆಯನ್ನು ಮುಂದಾಲೋಚನೆ ಮಾಡಿಯೇ ಮಾಡಿದ್ದೀರಾ? ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಅನೇಕ ಸಂಸ್ಥೆಗಳವರು ಹೆಚ್ಚಿನ ಕ್ಲಾಸುಗಳನ್ನು ತೆಗೆಯತಕ್ಕದ್ದಕ್ಕೆ ಅರ್ಜಿಗಳನ್ನು ಕೊಟ್ಟಿದ್ದಾರೆ, ಇದಕ್ಕನುಗುಣವಾಗಿ ಸರ್ಕಾರದವರು ಆಜ್ಞೆಯನ್ನು ಏನಾದರೂ ಹೊರಡಿಸಿದ್ದಾರೆಯೇ? Government have instructed already to grant liberally the permission. But the local authorities are not granting permission to a number of institutions to open additional classes ಹೀಗಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ಇಲ್ಲದೆ ಪರದಾಡುವಂತ ಪರಿಸ್ಥಿತಿ ಇದೆ, ಇವರ ಬಗ್ಗೆ ಸರ್ಕಾರದ ಧೋರಣೆ ಏನು? ಎಲ್ಲ ಮಕ್ಕಳಿಗೂ ಶಾಲೆಗಳಲ್ಲಿ ಪ್ರವೇಶ ಸಿಗತಕ್ಕ ವ್ಯವಸ್ಥೆ ಏನು ಮಾಡುತ್ತೀರಿ ?

†ಶ್ರೀ ಜಿ.ಬಿ. ಶಂಕರ್‌ರಾವ್.— ಮಾನ್ಯ ಸದಸ್ಯರುಗಳು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಸರಿಯಾಗಿ ಉತ್ತರ ಕೊಡಬೇಕು ಎಂದರೆ ನಾನು ಚಿಕ್ಕವಾದಂಥ ಹೇಳಿಕೆಯನ್ನು ಕೊಡಬೇಕಾಗುತ್ತದೆ. ನಂತರ ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಬೇಕು ಎಂದರೆ ಕೇಳಬಹುದು.